## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ಇವರು ಪ್ರಸ್ತಾಪಿಸಿರುವ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ:-

**ವಿಷಯ:-**

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ಓದುತ್ತಿರುವ ಮಕ್ಕಳಿಗೆ ಇನ್ನುವರೆಗೆ ಪಠ್ಯಪುಸ್ತಕ-ಯೂನಿಫಾರಂ-ಶೂಗಳನ್ನು ವಿತರಿಸಿರುವುದಿಲ್ಲ ಎಂಬ ವಿಷಯದ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ತರಲು ಬಯಸುತ್ತೇನೆ.

---

**ಉತ್ತರ :-**

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ಓದುತ್ತಿರುವ ಮಕ್ಕಳಿಗೆ ವಿತರಿಸಲಾಗಿರುವ ಪಠ್ಯಪುಸ್ತಕ-ಯೂನಿಫಾರಂ-ಶೂಗಳ ವಿವರ ಕೆಳಕಂಡಂತಿದೆ :-

**ಪಠ್ಯಪುಸ್ತಕ:**

ವಿದ್ಯಾವಿಕಾಸ ಯೋಜನೆಯಡಿ 2023-24ನೇಯ ಸಾಲಿನಲ್ಲಿ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ. ಪ್ರಸ್ತುತ, ಪೂರ್ಣ ಪ್ರಮಾಣದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಿ ಶಾಲೆಗಳಿಗೆ ವಿತರಿಸಲಾಗಿದೆ.

**ಉಚಿತ ಸಮವಸ್ತ್ರ (ಯೂನಿಫಾರಂ):**

ವಿದ್ಯಾವಿಕಾಸ ಯೋಜನೆಯಡಿ 2023-24ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗುತ್ತಿದೆ. ಪ್ರಸ್ತುತ, 2023-24ನೇ ಸಾಲಿನಲ್ಲಿ ಶೇ.83 ರಷ್ಟು ಮಕ್ಕಳಿಗೆ ಸಮವಸ್ತ್ರಗಳು ತಲುಪಿದ್ದು, ಬಾಕಿ ಶೇ.17 ರಷ್ಟು ಮಕ್ಕಳಿಗೆ ಜುಲೈ ಅಂತ್ಯದೊಳಗೆ ಸಮವಸ್ತ್ರ ಸರಬರಾಜು ಪೂರ್ಣಗೊಳ್ಳಲಿದೆ.

**ಶೂ ಮತ್ತು ಸಾಕ್ಸ್:**

ವಿದ್ಯಾವಿಕಾಸ ಯೋಜನೆಯಡಿ 2023-24ನೇ ಸಾಲಿನಲ್ಲಿ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ಉಚಿತವಾಗಿ ನೀಡಲಾಗುತ್ತಿದೆ. ಎಸ್.ಎ.ಟಿ.ಎಸ್ ಮಕ್ಕಳ ಸಂಖ್ಯೆಗನುಗುಣವಾಗಿ ಶೂ ಮತ್ತು ಸಾಕ್ಸ್ ಖರೀದಿ ಮಾಡುವಂತೆ ತಿಳಿಸಿ ಎಸ್.ಡಿ.ಎಂ.ಸಿ ಗಳಿಗೆ ಒಟ್ಟು ರೂ.125.00 ಕೋಟಿಗಳ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ : ಇಪಿ 62 ಎಂಪಿಇ 2023 .

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು